# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 289 |
| 2 | ಸದಸ್ಯರ ಹೆಸರು | ಶ್ರೀ ಕೆ.ಎ.ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು) |
| 3 | ಉತ್ತರಿಸಬೇಕಾದ ದಿನಾಂಕ | 09.12.2020 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಭೂನ್ಯಾಯ ಮಂಡಳಿಯಲ್ಲಿ ಮಂಜೂರಾದ ಮತ್ತು ದರಖಾಸ್ತು ಮಂಜೂರಾದ ಅಂಶಿಕ ಜಮೀನುಗಳ ಖಾತೆದಾರರ ಪೋಡಿ ಮಾಡದೆ ಸರಿಯಾದ ಜಾಗದ ದಾಖಲೆಗಳನ್ನು ಸಿದ್ದಪಡಿಸುವುದು ಸಾಧ್ಯವಾಗದಿರುವ ಸಮಸ್ಯೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸದಿರಲು ಕಾರಣಗಳೇನು; | **ಭೂನ್ಯಾಯ ಮಂಡಳಿ ಮತ್ತು ದರಖಾಸ್ತು ಮಂಜೂರಾದ ಜಮೀನುಗಳ ಪೋಡಿ ದಾಖಲೆಗಳನ್ನು ಸಿದ್ದಪಡಿಸಲು ಸಾಧ್ಯವಾಗದಿರಲು ಇರುವ ಕಾರಣಗಳೇನೆಂದರೆ,**<br>1) ಆಕಾರಬಂದು ಮತ್ತು ಪಹಣಿಗಳಲ್ಲಿ ದಾಖಲಾಗಿರುವ ವಿಸ್ತೀರ್ಣದಲ್ಲಿ ವ್ಯತ್ಯಾಸಗಳಿರುವುದು ಹಾಗೂ ಪಹಣಿಯ ಕಾಲಂ 3 ಮತ್ತು 9 ರಲ್ಲಿರುವ ವ್ಯತ್ಯಾಸಗಳಿರುವುದು.<br>2) ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು (ಮ್ಯುಟೇಷನ್, ಪಹಣಿ, ಮಂಜೂರಿ ಆದೇಶಗಳು-ಇತರೆ) ಲಭ್ಯವಾಗದಿರುವುದು.<br>3) ಭೂಮಂಜೂರಾತಿ ಪ್ರಕರಣಗಳಲ್ಲಿ ನಮೂನೆ 1 ರಿಂದ 5 ಭರ್ತಿ ಮಾಡುವಲ್ಲಿ ಮಂಜೂರಾತಿ ದಾಖಲೆಗಳ ಸರಿಯಾಗಿ ಲಭ್ಯವಾಗದೇ ಇರುವುದು.<br>4) ಭೂಮಂಜೂರಾತಿ ಪ್ರಕರಣಗಳಲ್ಲಿ ಮಂಜೂರಿ ಮತ್ತು ಅನುಭವ ವಿಸ್ತೀರ್ಣಗಳಲ್ಲಿ ವ್ಯತ್ಯಾಸ ಇರುವುದು.<br>5) ಭೂಮಂಜೂರಾತಿ ಪ್ರಕರಣಗಳಲ್ಲಿ ಜಮೀನಿನ ಆಕಾರಬಂದಿನ ವಿಸ್ತೀರ್ಣಕ್ಕಿಂತ ಹೆಚ್ಚಿನ ಕ್ಷೇತ್ರಕ್ಕೆ ಮಂಜೂರಿ ಆದೇಶ ಮಾಡಿರುವುದರಿಂದ ಪಹಣಿ ಸರಿಪಡಿಸುವಲ್ಲಿ ತೊಂದರೆ ಇರುವುದು.<br>6) ಭೂಮಂಜೂರಾತಿ ಆದೇಶದಂತೆ ಸರ್ವೆ ನಂಬರು ಮತ್ತು ಅನುಭವದಂತೆ ಸರ್ವೆ ನಂಬರು ಬೇರೆ ಬೇರೆಯಾಗಿರುವುದು.<br>7) ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲವಾಗಿರುವುದನ್ನು ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಲಾಶ ಬೇಕಾಗುವುದು<br>8) ಮಂಜೂರಿದಾರರ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಇರುವುದರಿಂದ,<br>9) ನ್ಯಾಯಾಲಯದಲ್ಲಿ ವಿವಾದಗಳಿರುವುದರಿಂದ<br>ಮಂಜೂರಾದ ಜಮೀನುಗಳ ಪೋಡಿ ದಾಖಲೆಗಳನ್ನು ಸಿದ್ದಪಡಿಸಲು ವಿಳಂಬವಾಗುತ್ತದೆ |

| | | |
|---|---|---|
| ಆ) | ಜನ ಸಾಮಾನ್ಯರಿಗೆ ಸರಿಯಾದ ಜಾಗದ ದಾಖಲೆಗಳನ್ನು ಸಿದ್ಧ ಪಡಿಸುವಲ್ಲಿ ನೆರವಾಗಲು, ಪೋಡಿ ಮುಕ್ತ ಅಭಿಯಾನವನ್ನು ಯಾವಾಗ ಪ್ರಾರಂಭಿಸಲಾಯಿತು ಈ ಅಭಿಯಾನದಂತೆ ತುಮಕೂರು ಜಿಲ್ಲೆಯಲ್ಲಿ ಭೂಮಾಪನ ಕಾರ್ಯ ಪೂರ್ಣಗೊಂಡ ಗ್ರಾಮಗಳು ಯಾವುವು; (ವಿವರಗಳನ್ನು ನೀಡುವುದು) | ರಾಜ್ಯದಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆ ಯನ್ನು **ಮಾಹೆ ಸೆಪ್ಟಂಬರ್-2015** ರಲ್ಲಿ ಪ್ರಾರಂಭಿಸಲಾಗಿದೆ.<br>ಪೋಡಿ ಮುಕ್ತ ಗ್ರಾಮ ಯೋಜನೆಯಡಿ ತುಮಕೂರು ಜಿಲ್ಲೆಯ ಒಟ್ಟು 2826 ಗ್ರಾಮಗಳ ಪೈಕಿ, 1687 ಗ್ರಾಮ ಗಳಲ್ಲಿ ಅಳತೆ ಕಾರ್ಯ ಪೂರೈಸಲಾಗಿದೆ<br>**ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಅಳತೆ ಕಾರ್ಯ ಪೂರೈಸಲಾಗದ ಗ್ರಾಮಗಳ ತಾಲ್ಲೂಕುವಾರು ವಿವರ**<br>(see table below)<br>ಪೋಡಿ ಮುಕ್ತ ಗ್ರಾಮ ಯೋಜನೆಯಡಿ ತುಮಕೂರು ಜಿಲ್ಲೆಯಲ್ಲಿ ಅಳತೆ ಕಾರ್ಯ ಪೂರ್ಣಗೊಂಡ ಗ್ರಾಮಗಳ ವಿವರವನ್ನು **ಅನುಬಂಧ-1** ರಲ್ಲಿ ನೀಡಿದೆ. |
| ಇ) | ಶಿರಾ ತಾಲ್ಲೂಕಿನಲ್ಲಿ ಭೂಮಾಪನ ಕಾರ್ಯ ಪೂರ್ಣಗೊಂಡ ಗ್ರಾಮಗಳಲ್ಲಿ ಖಾತೆದಾರರಿಗೆ ಪಹಣಿ ದಾಖಲಿಸಿ, ಪಹಣಿ ಪತ್ರ ನೀಡುವ ಕಾರ್ಯವನ್ನು ಪೂರ್ಣಗೊಳಿಸ ಲಾಗಿದೆಯೆ? (ವಿವರಗಳನ್ನು ನೀಡುವುದು) | ಪೋಡಿ ಮುಕ್ತ ಗ್ರಾಮ ಯೋಜನೆಯಡಿ ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನಲ್ಲಿ ಒಟ್ಟು 249 ಗ್ರಾಮಗಳ ಪೈಕಿ, 116 ಗ್ರಾಮಗಳಲ್ಲಿ ಅಳತೆ ಕಾರ್ಯ ಪೂರೈಸಿ 112 ಗ್ರಾಮಗಳಲ್ಲಿ ದುರಸ್ತಿ ಕಾರ್ಯವನ್ನು ಪೂರೈಸಿ 14,060 ಏಕವ್ಯಕ್ತಿ ಪಹಣಿಗಳನ್ನು ಸೃಜಿಸಲಾಗಿದೆ. |

**ಪೋಡಿ ಮುಕ್ತ ಗ್ರಾಮ ಯೋಜನೆಯಡಿ ಅಳತೆ ಕಾರ್ಯ ಪೂರೈಸಲಾಗದ ಗ್ರಾಮಗಳ ತಾಲ್ಲೂಕುವಾರು ವಿವರ**

| **ಕ್ರ** | **ತಾಲ್ಲೂಕು** | **ಅಳತೆ ಕಾರ್ಯ ಪೂರೈಸ ಲಾಗದ ಗ್ರಾಮಗಳ ಸಂಖ್ಯೆ** |
|---|---|---|
| 1 | ಚಿಕ್ಕನಾಯಕನಹಳ್ಳಿ | 121 |
| 2 | ಸಿರಾ | 116 |
| 3 | ಪಾವಗಡ | 93 |
| 4 | ಮಧುಗಿರಿ | 320 |
| 5 | ಕೊರಟಗೆರೆ | 249 |
| 6 | ತುಮಕೂರು | 385 |
| 7 | ಗುಬ್ಬಿ | 194 |
| 8 | ತಿಪಟೂರು | 108 |
| 9 | ತುರುವೇಕೆರೆ | 47 |
| 10 | ಕುಣಿಗಲ್ | 54 |
| | **ಒಟ್ಟು** | **1687** |

ಸಂಖ್ಯೆ: ಕಂಇ 175 ಎಸ್‌ಎಸ್‌ಸಿ 2020

(ಆರ್.ಅಶೋಕ)
ಕಂದಾಯ ಸಚಿವರು